


International Journal of Kannada Research
www.kannadajournal.com

**ISSN: 2454–5813**
IJKR 2023; 9(1): 196-198

© 2023 IJKR
www.kannadajournal.com
Received: 25-01-2023
Accepted: 28-02-2023


**ಡಾ. ರಾಜೇಶ್ವರಿ ಮ. ಹಲಸಂಗಿ**
ಉಪನ್ಯಾಸಕರು ಸಿ. ಎಂ.
ಮನಗೂಳಿ ಕಾಲೇಜು, ಸಿಂದಗಿ,
ಜಿ-ವಿಜಯಪುರ, ಕರ್ನಾಟಕ,
ಭಾರತ

**Corresponding Author:**
**ಡಾ. ರಾಜೇಶ್ವರಿ ಮ. ಹಲಸಂಗಿ**
ಉಪನ್ಯಾಸಕರು ಸಿ. ಎಂ.
ಮನಗೂಳಿ ಕಾಲೇಜು, ಸಿಂದಗಿ,
ಜಿ-ವಿಜಯಪುರ, ಕರ್ನಾಟಕ,
ಭಾರತ

# ಪ್ರಾಚೀನ ಸಾಹಿತ್ಯದಲ್ಲಿ ಅಸ್ಪೃಶ್ಯತೆ

**ಡಾ. ರಾಜೇಶ್ವರಿ ಮ. ಹಲಸಂಗಿ**

**ಪೀಠಿಕೆ**

ಪ್ರಾಚೀನ ಕನ್ನಡ ಸಾಹಿತ್ಯದ ಉದ್ದೇಶ ಮುಖ್ಯವಾಗಿ ಧರ್ಮ ಪ್ರಸಾರವಾಗಿತ್ತು ಎಂದರೆ ತಪ್ಪಾಗಲಾರದು. ಪಂಪ ಮಾತ್ರ ಈ ಹೇಳಿಕೆಯಿಂದ ದೂರ ಉಳಿಯುವನು. ಧರ್ಮ ಮತ್ತು ಕಾವ್ಯವನ್ನು ಸಮಾನವಗಿ ತೂಗಿಸಿಕೊಂಡು ಹೋಗುವ ತತ್ವ ಅವನ ಕಾವ್ಯದಲ್ಲಿದೆ. 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗವಮಂ' ಎಂದು ಹೇಳಿದರೂ ಪಂಪನ ಲೌಕಿಕ ಕಾವ್ಯ ಧರ್ಮದಿಂದ ಹೊರತಾಗಿಲ್ಲ. ಈ ಕವಿಗೆ ಸಾಮಾನ್ಯವಾಗಿ ವಿಮರ್ಶಕರೆಲ್ಲರೂ 'ಸಮನ್ವಯ ಕವಿ' ಎಂದು ಹೇಳಿದರೂ ಕೆಲವರು ಪಂಪನಲ್ಲಿ ಇರುವ ಅಸಮತೋಲನತ್ವ ಮತ್ತು ದ್ವಂದ್ವಗಳನ್ನು ಗುರುತಿಸುತ್ತಾ ಅಪ್ರತ್ಯಕ್ಷವಾಗಿ ತಮ್ಮಲ್ಲಿರುವ ದ್ವಂದ್ವಗಳನ್ನೂ ಮುಂದಿಟ್ಟಿದ್ದಾರೆ ಆದರೆ ವಾಸ್ತವದಲ್ಲಿ ಪಂಪನನ್ನು ನಿಖರವಾಗಿ ಸಮನ್ವಯ ಕವಿ ಎಂದು ಕರೆಯಲಾಗದು. ಬದಲಾಗಿ ಈತ ತಕ್ಕಡಿಯ ಎರಡು ಪೊಟರೆಗಳಲ್ಲಿ ತನ್ನೆರಡು ಕಾಲುಗಳನಿಟ್ಟು ತೂಗಲು ಪ್ರಯತ್ನಿಸುವ ಪ್ರಜ್ಞಾವಂತ ಕವಿಯಾಗಿ ಕಾಣುತ್ತಾನೆ.[೧]

ಪಂಪನಂತಹ ಪ್ರಜ್ಞಾವಂತ ಕವಿಯಲ್ಲಿಯೂ ಸಹ ಧರ್ಮಪರವಾದ ನಿಲುವುಗಳಿರುವುದನ್ನೇ ಹೆಚ್ಚಾಗಿ ಕಾಣುತ್ತೇವೆ. ಆತನ ಭಾರತ ಕಾವ್ಯ ವರ್ಗ ವರ್ಣಗಳಲ್ಲಿಯ ಸಂಘರ್ಷ ಆ ಕಾಲಕ್ಕೆ ಹೇಗಿತ್ತು ಎಂಬುವುದಕ್ಕೆ ನಿದರ್ಶನವಾಗಿದೆ. ಜೊತೆಗೆ ಧರ್ಮದ ಪ್ರೇರಣೆ ಪ್ರಭಾವವು ಸಹ ಕವಿಯ ಮೆಲಿದೆ.

ಸಾಹಿತ್ಯ ಹರಿವ ನೀರಿನಂತೆಯೂ ಹೌದು. ಸಮಾಜ ಬಿಂಬ ಸ್ವರೂಪವು ಹೌದು, ಅದರಲ್ಲಿ ಭಾರತೀಯ ಸಾಹಿತ್ಯ ಧರ್ಮವನ್ನೆ ಕೇಂದ್ರ ಬಿಂದುವನ್ನಾಗಿಸಿಕೊಂಡು ಪುರುಷಾರ್ಥದಡೆಗೆ ತುಡಿಯುವಂಥದಾಗಿದೆ. ಎಲ್ಲ ಮಾನವರಿಗೂ ಸ್ವೀಕಾರಾರ್ಹವಾದುದೇ ಧರ್ಮ ಎಂಬ ವಿಶಾಲ ಅರ್ಥದಿಂದ ಧರ್ಮವನ್ನು ವ್ಯಾಖ್ಯಾನಿಸಲಾಗಿದೆ. ಇಂಥ ಧರ್ಮದ ಅರ್ಥವನ್ನೊಳಗೊಂಡ ಒಂದು ಸಾಂಸ್ಕೃತಿಕ ಸಂದರ್ಭ ಇರಲ್ಲಿಕ್ಕೂ ಸಾಕು, ಆದರೆ ಈ ಧರ್ಮ ಕಲಾಂತರದಲ್ಲಿ ಸಂಕುಚಿತ ಅರ್ಥವನ್ನು ತಳೆದಿದೆ. ಕೃತಿಗಳಲ್ಲಿ ಒಂದು ಬಗೆಯಾಗಿ ದಾಖಲಾದರೆ ವಾಸ್ತವದಲ್ಲಿ ಮತ್ತೊಂದು ಬಗೆಯಲ್ಲಿರುವುದು ಕಂಡುಬರುತ್ತದೆ.[೨]

ಹೀಗೆ ಧರ್ಮದ ಪ್ರಭಾವ ಪ್ರಾಚೀನ ಕನ್ನಡ ಸಾಹಿತ್ಯದ ಮೇಲೆ ಒಂದಲ್ಲ ಒಂದು ಬಗೆಯಿಂದ ಪ್ರೇರಿತವೇ ಆಗಿದೆ. ಇಂಥ ಮನಸ್ಥಿಯ ಕವಿ ಸಮಾಜದ ಕೆಳವರ್ಗದ ಧ್ವನಿಯಾಗಬಲ್ಲನೇ? ಇಲ್ಲಿ ಮುಖ್ಯವಾಗಿ ಪ್ರಾಚೀನ ಸಾಹಿತ್ಯದಲ್ಲಿ ಅಸ್ಪೃಶ್ಯತೆ ಯಾವ ರೀತಿಯಲ್ಲಿ ಆಚರಿಸಲಾಗುತ್ತಿತ್ತು ಮತ್ತು ಅಂದಿನ ಕವಿಗಳು 'ಅಸ್ಪೃಶ್ಯ ಪ್ರಜ್ಞೆ' ಉಳ್ಳವರಾಗಿದ್ದರೆ? ಎಂಬುವುದನ್ನು ನೋಡಬೇಕಾಗಿದೆ.

ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ರನ್ನ, ಒಂದನೆಯ ನಾಗವರ್ಮ ಈ ಎಲ್ಲ ಕವಿಗಳ ಕೃತಿಗಳು ತಮ್ಮ ತಮ್ಮ ಧರ್ಮವೇ ಶ್ರೇಷ್ಠವೆಂದು ಸಾರಿಕೊಳ್ಳುತ್ತವೆ. ಇದರ ಜೊತೆಗೆ ಕೆಳಜಾತಿಗಳನ್ನು ಇದೆ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ[೧] .

ಸಾಹಿತಿಯಾದವನು ಜಾತಿ, ಮತ, ಧರ್ಮ, ಜನಾಂಗಗಳೆಂಬ ಸೀಮಿತ ಗಡಿಯನ್ನು ಮೀರಿ ಸೀಮಾತೀತನಾಗಿ ನಿಲ್ಲಬೇಕಾಗುತ್ತದೆ. ಹೀಗಾದಾಗ ಮಾತ್ರ ಸಾಹಿತ್ಯ ಕೃತಿಗಳಿಂದ ಸಮಾಜದ ಮೇಲೆ ಆರೋಗ್ಯಕರ ಪರಿಣಾಮ ಆಗುತ್ತದೆ. ಪ್ರಾಚೀನ ಕನ್ನಡ ಕವಿಗಳು ಬದುಕಿರುವ ಸಂದರ್ಭ ಧರ್ಮಗಳ ಕಿತ್ತಾಟದಿಂದ ಕೂಡಿತ್ತು.

ಇಲ್ಲಿಯ ಪ್ರತಿಯೊಬ್ಬರಿಗೂ ತಮ್ಮ ಧರ್ಮವೇ ಶ್ರೇಷ್ಠವಾಗಿತ್ತು. ಅದಕ್ಕಾಗಿ ಕನ್ನಡ ಭಾಷೆಯನ್ನು ಬಳಸಿಕೊಂಡರು.

ವಡ್ಡಾರಾಧನೆಯ ಮೊದಲ ಕಥೆಯಾದ 'ಸುಕುಮಾರಸ್ವಾಮಿ ಕಥೆ'ಯಲ್ಲಿ ಬರುವ ಅಗ್ನಿಭೂತಿ ಮತ್ತು ವಾಯುಭೂತಿ ಬ್ರಾಹ್ಮಣ ಸಹೋದರರು, ವಾಯುಭೂತಿ 'ಸೂರ್ಯಮಿತ್ರ' ಮುನಿಗಳನ್ನು ಅಪಮಾನಗೊಳಿಸಿದಾಗ ಮುಂದಿನ ಪರಿಣಾಮ ಏನೆಂಬುವುದಕ್ಕೆ ಕೃತಿಕಾರ ಕೆಳಜಾತಿಗಳನ್ನು ಇಲ್ಲಿ ಬಳಸಿಕೊಂಡಿದ್ದಾನೆ. ವಾಯುಭೂತಿಯು ಈ ಕೃತ್ಯದಿಂದ ಏಳುದಿವಸಗಳೊಳಗಾಗಿ ಔದುಂಬರ ಕುಷ್ಠರೋಗಕ್ಕೆ ಬಲಿಯಾಗಿ ಸತ್ತು 'ಚಂಪಾನಗರವೆಂಬ ಪಟ್ಟಣದಲ್ಲಿ ಮಾದಿಗರ ಮನೆಯಲ್ಲಿ ಒಂದು ಹೆಣ್ಣುನಾಯಿಯಾಗಿ ಹುಟ್ಟಿತು. ಆ ಮನೆಯಲ್ಲಿ ಸತ್ತು ಅದೇ ಪಟ್ಟಣದ ಮಾದಿಗರ ಮುಖ್ಯಸ್ಥನಾದ ನೀಳನೆಂಬವನಿಗೆ ಮಗಳಾಗಿ ಹುಟ್ಟಿ, ಹುಟ್ಟುಗುರುಡಿಯಾಗಿಯೂ, ಹೊಲತಿಯಾಗಿಯೂ, ರೋಗದಿಂದ ಪೀಡಿತೆಯಾಗಿ, ಹಸಿವೆಂಬ ಬೆಂಕಿಯಿಂದ ಬಳಲುತ್ತ ಬದುಕಿದ್ದಳು[೩].

ಈ ರೀತಿಯಾಗಿ ವಾಯುಭೂತಿ ತನ್ನ ಹಿಂದಿನ ಪಾಪದ ಕಾರಣದಿಂದಲೇ ಹೊಲೆಮಾದಿಗ ಕುಲದಲ್ಲಿ ಹೆಣ್ಣಾಗಿ ಹುಟ್ಟಿದನೆಂದು ಇಲ್ಲಿ ಹೇಳಲಾಗಿದೆ. ಇಲ್ಲಿ ಹೊಲೆ ಮತ್ತು ಮಾದಿಗ ಎನ್ನುವ ಶಬ್ದಗಳು ಯಾವುದೇ ಅರ್ಥವ್ಯತ್ಯಾಸವಿಲ್ಲದೆ ಬಳಕೆಯಾಗಿರುವುದನ್ನು ಕಾಣುತ್ತೇವೆ. ಅಂದರೆ ಕೀಳು ಜಾತಿಗಳನ್ನು ಗುರುತಿಸಲು ಹೊಲೆಯ ಅಥವಾ ಮಾದಿಗ ಎನ್ನುವ ಜಾತಿಸೂಚಕ ಪದಗಳನ್ನು ಬಳಸುತ್ತಿರುವುದು ಕಂಡು ಬರುತ್ತದೆ.

ಕೆಳಜಾತಿಯ ಜನರನ್ನು ಪ್ರಾಣಿಗಳಂತೆಯೆ ಕಾಣಲಾಗಿದೆ. ಅಷ್ಟೇ ಅಲ್ಲದೆ ಈ ಸಾಹಿತ್ಯದ ಮುಖ್ಯ ಉದ್ದೇಶ ಧರ್ಮಪ್ರಚಾರ ಆಗಿರುವುದರಿಂದ ಪಾಪ ಮಾಡಿದವರು ನಾಯಿ, ಹಂದಿಯಾಗಿ ಇಲ್ಲವೇ ಹೊಲೆಮಾದಿಗರಾಗಿ ಹುಟ್ಟುತ್ತಾರೆ. ಜೊತೆಗೆ ಕುರುಡ ಕುರೂಪಿತನವು ಸಹ ಹಿಂದಿನ ಜನ್ಮದ ಪಾಪದ ಫಲ ಎಂದು ಹೇಳಿ ಅದಕ್ಕೆ ಪರಿಹಾರ ಕೂಡ ಸೂಚಿಸಲಾಗಿದೆ. ಆ ಪರಿಹಾರ ಏನೆಂದರೆ ಶ್ರಾವಕ ಧರ್ಮದ ವ್ರತಗಳನ್ನು ಆಚರಿಸಿದರೆ ಮುಂದಿನ ಜನ್ಮದಲ್ಲಿ ಉತ್ತಮ ಕುಲದಲ್ಲಿ ಹುಟ್ಟುತ್ತಾರೆ ಎಂಬುವುದು ಇಲ್ಲಿ ಕುರೂಪಿಯಾದ ಮಾದಿಗ ಹೆಣ್ಣು ಜೈನ ಧರ್ಮದ ವ್ರತಗಳನ್ನು ಆಚರಿಸಿ ಸತ್ತು ರಾಜಪುರೋಹಿತನ ಮಗಳಾಗಿ (ನಾಗಶ್ರೀ)ಯಾಗಿ ಹುಟ್ಟುತ್ತಾಳೆ.

ಹೊಲೆಮಾದಿಗರ ಜಾತಿಯನ್ನು ನಿರ್ದಶಿಸಿ ಹೇಳುವಂತೆ ಅನ್ಯಜಾತಿಯವರನ್ನು ಎಂದರೆ ಮೇಲುಜಾತಿಯವರನ್ನು ಹೀಗೆ ಉದ್ದೇಶಿಸಿ ಹೇಳುವುದು ಕಂಡು ಬರುವುದಿಲ್ಲ. ಆದರೆ ಮನುಷ್ಯ ಕುಲದಲ್ಲಿಯೆ ಹುಟ್ಟಿದ ಹೊಲೆಮಾದಿಗರನ್ನು ಪ್ರತ್ಯೇಕಪಡಿಸಿ ಭೂತಗನ್ನಡಿಯಲ್ಲಿಟ್ಟು ಹೇಳುವುದು ವಡ್ಡಾರಾಧನೆ ಕಥೆಗಳಲ್ಲಿ ಕಾಣುತ್ತೇವೆ[೪].

ಪಂಪಭಾರತದಲ್ಲಿ ಕರ್ಣನ ಕುಲದ ವಿಚಾರವಾಗಿ ನಡೆದ ವಾದ ವಿವಾದಗಳು ಬಹು ಚರ್ಚಿತವಾಗಿವೆ. ಕರ್ಣ ಹೀನ ಕುಲದವನಾದುದರಿಂದ ವೀರಪಟ್ಟ ಕಟ್ಟಲು ಭೀಷ್ಮ, ದ್ರೋಣ ಮುಂತಾದವರರಿಂದ ವಿರೋಧ ವ್ಯಕ್ತವಾಗುತ್ತದೆ. ಆಗ ದುರ್ಯೋಧನ ಕರ್ಣನ ಪರವಾಗಿ ನಿಂತು ಹೀಗೆ ಹೇಳುವನು. 'ಕರ್ಣನನೀಗಲೆ ಕುಲಜನಂ ಮಾಡಿ ತೋರ್ಪೆನ್' ಇಲ್ಲಿ ವೀರನೂ, ಪರಾಕ್ರಮಿಯೂ ಆದ ಕರ್ಣನ ಅವಶ್ಯಕತೆ ದುರ್ಯೋಧನನಿಗೆ ಇದೆ. ತನ್ನ ಅನುಕೂಲಕ್ಕಾಗಿ ಕರ್ಣನಿಗೆ ಕುಲಜನನ್ನಾಗಿ ಮಾಡಿದನು. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕುಲಜನನ್ನಾಗಿಸುವ ವಿಧಿಕರ್ಮಗಳಿದ್ದವು ಎಂಬುದು ಈ ಸಂಗತಿಯಿಂದ ಸ್ಪಷ್ಟವಾಗುತ್ತದೆ, ಭಾರತಯುದ್ಧಕ್ಕೆ ಕರ್ಣ ಇರಬೇಕಾಗಿತ್ತು. ಈ ಕಾರಣದಿಂದಲೇ ದುರ್ಯೋಧನ ಆತನನ್ನು ಉತ್ತಮ ಕುಲದವನನ್ನಾಗಿ ಪರಿವರ್ತಿಸಿದ. ದುರ್ಯೋಧನನ ಈ ಕಾರ್ಯ ರಾಜಕೀಯ ಉದ್ದೇಶದಿಂದಲೇ ಕೂಡಿತ್ತು ಎಂಬುದು ಸ್ಪಷ್ಟವಾಗಿದೆ.

ಇದೇ ದುರ್ಯೋಧನ ಕರ್ಣನೊಂದಿಗೆ ಬೇಟೆಗೆ ಹೋದಾಗ ಇಬ್ಬರಿಗೂ ಸಮಾನ ಗೌರವವನ್ನು ತೋರಿದ ಸತ್ಯಂಪರರಲ್ಲಿ 'ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇಳ್' ಎಂದು ಹೇಳುವ ಮಾತೆ ದುರ್ಯೋಧನನ ಮೂಲ ಗುಣವನ್ನು ಬಿಚ್ಚಿಡುತ್ತದೆ[೫].

ಇಲ್ಲಿ ಕರ್ಣನಿಗೆ ಯಾವುದೇ ಸ್ಥಾನಮಾನವಿಲ್ಲದ ಸಂದರ್ಭದಲ್ಲಿ ಅಪಮಾನ ನಿಂದನೆಗೆ ಗುರಿಯಾದಂತೆ ಮುಂದೆ ಆತ ಸೇನಾಪತಿ ಆದ ನಂತರವೂ ಜಾತಿಯ ಕಾರಣದಿಂದಲೇ ನಿಂದನೆಯ ಹಿಂಸೆ ತಪ್ಪಲಿಲ್ಲ.

ಒಂದನೆಯ ನಾಗವರ್ಮನ ಕಾದಂಬರಿಯಲ್ಲಿ ಗಿಳಿ ಮತ್ತು ಚಾಂಡಾಲಿಯ ಪ್ರಸಂಗವನ್ನು ಜಾತಿಯ ನಿಂದನೆಯ ಹಿನ್ನಲೆಯಲ್ಲಿ ನೋಡಬಹುದು, ಅಸ್ಪೃಶ್ಯರು ಅಥವಾ ಕೆಳಜಾತಿಯವರು ಹಿಂದಿನ ಜನ್ಮದ ಪಾಪದ ಕಾರಣದಿಂದಲೇ ಹೊಲೆಮಾದಿಗರಾಗಿ ಹುಟ್ಟುವರು ಎಂಬ ವಿಚಾರವನ್ನು ನಾಗವರ್ಮ ಮತ್ತೆ ಇಲ್ಲಿ ನಿರೂಪಿಸಿದ್ದಾನೆ. ಅಷ್ಟೆ ಅಲ್ಲ ಕೆಳಜಾತಿಯವಳಾದ ಆದರೆ ಅತ್ಯಂತ ರೂಪದಿಂದ ಕೂಡಿದ ಮಾತಂಗಿಯ ಸೌಂದರ್ಯ ರೂಪಿಸಿರುವ ಬ್ರಹ್ಮನು ಸಹ ಆಕೆಯನ್ನು ಮುಟ್ಟಿರಲಾರ ಎಂಬುದು ಪದ್ಯದಲ್ಲಿ ವ್ಯಕ್ತಪಡಿಸಿದ್ದಾನೆ.

ಕಮಲಭವಂ
ಮೊದಲೊಳ್ ಮಾತಂಗಿಯೆಂದು ತಾಂ ಮುಟ್ಟದೆ ಮಾ
ಡಿದನಕ್ಕುಂ ಕಯ್ಯೋಳ್ ಮು
ಟ್ಟಿದೊಡಿಂತಗ್ಗಳಿಸಿ ತೋರ್ಕುಮೆ ಲಾವಣ್ಯಂ

ಸೃಷ್ಟಿಸಿದ ಬ್ರಹ್ಮನು ಕೆಳಜಾತಿಯವರನ್ನು ಮುಟ್ಟುವುದಿಲ್ಲ ಎಂಬುದು ನಾಗವರ್ಮನ ಅಭಿಪ್ರಾಯ. ಕೃತಿಯ ಆರಂಭದಲ್ಲಿ ಚಾಂಡಾಲ ಹುಡಗಿಯೊಬ್ಬಳು ಅರಸನನ್ನು ನೋಡಲು ಕಾಯುತ್ತಿರುತ್ತಾಳೆ. ಇದನ್ನು ತಿಳಿದ ಅರಸ ಆಕೆಗೆ ಅನುಮತಿ ನೀಡಿದನು. ಇಲ್ಲಿ ಕವಿಗೆ 'ಅಸ್ಪ್ರಶ್ಯತೆ ಪ್ರಜ್ಞೆ' ಇದೆ. ಎಂದು ಅನಿಸಿದರೂ ಮುಂದೆ ಆ ಚಾಂಡಾಲಿ ನಿಜವಾದ ಚಾಂಡಾಲಿ ಅಲ್ಲ ಆಕೆ ಶ್ವೇತಕೇತು ಮಹರ್ಷಿಯ ಹೆಂಡತಿ, ಆಕೆಯೂ ಸಹ ಉತ್ತಮ ಕುಲದವಳೆಂದು ಕೃತಿಕಾರ ಹೇಳುತ್ತಾನೆ.

ಚಾಂಡಾಲಿಯ ಪಾತ್ರ ಮಹಾಭಾರತದಲ್ಲಿ ಬರುವ ಕರ್ಣಣ ಪಾತ್ರಕ್ಕಿಂತ ಭಿನ್ನವಾದುದಲ್ಲ. ಕರ್ಣನನ್ನು ಅಸ್ಪೃಶ್ಯನೆಂದು ಕತೆಯುದ್ದಕ್ಕೂ ಹೇಳಿ ಕೊನೆಯಲ್ಲಿ ಆತನೇನು ಅಸ್ಪೃಶ್ಯನಲ್ಲ ಕುಂತಿಯ ಮಗನೇ ಆಗಿದ್ದ ಎಂದು ದಲಿತ ಚಾಂಡಾಲಿಯ ಪಾತ್ರವನ್ನು 'ದುಷ್ಟ ಚಾಂಡಾಲರ ಕುಲದಿಂದ' ತಗೆದು ಹಾಕಲಾಗುತ್ತದೆ'[೬].

ಒಟ್ಟಿನಲ್ಲಿ ಭಾರತೀಯ ಸಾಮಾಜಿಕ ವ್ಯವಸ್ಥೆ ಜಾತಿಯನ್ನು ತನ್ನ ಅನೂಕುಲಕ್ಕೆ ತಕ್ಕಂತೆ ಬಳಸಿಕೊಂಡಿರುವುದನ್ನು ಇತಿಹಾಸ, ಪ್ರಸ್ತುತದಲ್ಲಿಯೂ ಅದು ಮುಂದುವರೆಯುತ್ತಲಿದೆ. ಕೆಳಜಾತಿಯವರ ಶ್ರಮದಿಂದ ಮೇಲಿನವರ ಬದುಕು ಉತ್ತಮವಾಗುವಿಕೆಗೆ ಅವರು ಬೇಕು ಆದರೆ ಅವರ ಬದುಕು ದಾರಿದ್ರ್ಯದಿಂದ ಕೂಡಿರಬೇಕು ಎಂಬುದೇ ವ್ಯವಸ್ಥೆಯ ಹುನ್ನಾರವಾಗಿದೆ. ಸಾಹಿತಿ ಅಥವಾ ಲೇಖಕ ಇಂಥ ಶೋಷಿತರ ಪರವಾದ ಧನಿಯಾಗಿ ನಿಲ್ಲಬೇಕಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇಂಥ ಪ್ರಯತ್ನ ನಡೆದಿದೆಯಾದರೂ ಅದು ರಾಜಕೀಯ, ಧರ್ಮಪ್ರಚಾರದ ಉದ್ದೇಶದಿಂದ ಕೂಡಿತ್ತು ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

**ಅಡಿ ಟಿಪ್ಪಣಿ**

೧. ಸಂ : ಅರವಿಂದ ಮಾಲಗತ್ತಿ : ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೪, ಪುಟ ಸಂಖ್ಯೆ –೧೨೩

೨. ಅರವಿಂದ ಮಾಲಗತ್ತಿ : ಸಾಹಿತ್ಯಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಪುಟ ಸಂಖ್ಯೆ –೧

೩. ಟಿ. ಕೇಶವಭಟ್ಟ : ಶಿವಕೋಟ್ಯಾಚಾರ್ಯರ ವಡ್ಡಾರಾದನೆ ಗದ್ಯಾನುವಾದ, ಪುಟ ಸಂಖ್ಯೆ –೨೦

೪. ಅರವಿಂದ ಮಾಲಗತ್ತಿ : ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೪, ಪುಟ ಸಂಖ್ಯೆ–೧೧೯

೫. ಅದೇ ಪುಟ ಸಂಖ್ಯೆ –೧೨೭

6. ಅದೇ ಪುಟ ಸಂಖ್ಯೆ –೧೬೩